Reg no-KKNN 12 ಕ್ಷ - For Influential Publicity - 3-9-76

ಕೃಷಿ ಮತ್ತು ಕೈಗಾರಿಕೆಯ ಪರವಾಗಿ ಪಜ್ರಮಹೋತ್ಸವನೇರವೇರಿಸಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
60 ನೇ ವಜ್ರಮ್ಮಹೋತ್ಸವ ವರ್ಷ
★ Satyavadi Daily, Mysore 4 ★

ಸಂಸ್ಥಾಪಕರು: ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ಕುಜಗ್ರಹದಲ್ಲಿ

ಕುಜಗ್ರಹದಲ್ಲಿ ಚಿನ್ನ ಇದೆ ಎಂಬ ವದಂತಿ ಹೊರಟಿದೆ.

★

ಮೊಗಲಾಯರ ಕಾಲದ ನಾಣ್ಯ

ಮೊಗಲಾಯರ ಕಾಲದ 82 ಬೆಳ್ಳಿಯ ನಾಣ್ಯಗಳು ಒರಿಸ್ಸಾ ಬಳಿಯ ಕಲಹಂಡಿ ಜಿಲ್ಲೆಯಲ್ಲಿಯ ಒಂದು ಗ್ರಾಮದಲ್ಲಿ ಭೂಮಿಯನ್ನು ಅಗೆಯುತ್ತಿದ್ದಾಗ ಸಿಕ್ಕಿತು

○

ಪ್ರಾಚೀನ ಕಾಲದ ತಲೆ ಬುರುಡೆ

ಪೂರ್ವ ಫ್ರಾನ್ಸಿನಲ್ಲಿಯ ಓಲ್ಲಾಗಿನಲ್ಲಿ 8 ವರೆ ಸಾವಿರ ವರ್ಷಗಳ ಹಿಂದಿನ ತಲೆ ಬುರುಡೆಯನ್ನು ಫ್ರಾನ್ಸಿನ ಭೂಶೋಧಕರು ಪತ್ತೆ ಮಾಡಿದ್ದಾರೆ.

●

ಪ್ರವಾಸಾನುಕೂಲಕ್ಕಾಗಿ

ಕಲ್ಕತ್ತಾ — ಶ್ರೀರಾಮನು ತನ್ನ ವನವಾಸ ಕಾಲದಲ್ಲಿ ವಾಸಿಸಿದ ಸ್ಥಳಗಳಾದ ದಂಡಕಾರಣ್ಯ ಮತ್ತು ಪೂರ್ವ ಘಾಟ್ ಹಾಗೂ ಬೈಲಾಡಿಲ್ಲ ಬೆಟ್ಟ ಶ್ರೇಣಿಗಳಿಗೆ ಪ್ರವಾಸಿಗರು ಹೋಗಲು ಅನುಕೂಲವಾಗಿ ಸಲಾಗುತ್ತಿದೆ.

★

ಸಕ್ಕರೆ ಬೆಲೆ ಇಳಿಕೆ

ನವ ದೆಹಲಿ — ಸಕ್ಕರೆ ಕಾರ್ಖಾನೆಗಳು ಸಕ್ಕರೆ ಬೆಲೆಯನ್ನು ಸ್ವಲ್ಪ ತಗ್ಗಿಸಿದೆ ಮುಕ್ತ ಮಾರುಕಟ್ಟೆಗಳಲ್ಲಿ ಕೆಜಿಗೆ 5 ರೂ ಇಳಿಸಿನಾ ಅದಕ್ಕೆ ಕಡಿಮೆ ದಂದಲ್ಲಿ ಸಿಗುವುದು.

○

ರಾಜ್ಯ ಸಭೆಗೆ ಆಸ್ತು

ನವ ದೆಹಲಿ — ಪಾರ್ಲಿಮೆಂಟ್ ಸದಸ್ಯರಿಗೆ ಇತರ ವಿಷಯಗಳ ಜೊತೆಗೆ ಪೆನ್ ಷನ್ ಕೊಡುವ ಮಸೂದೆಗೆ ರಾಜ್ಯಸಭೆ ಅನುಮತಿ ನೀಡಿತು.

ವಾರಕ್ಕೊಮ್ಮೆ ಲಾಟರಿ

ಬೆಂಗಳೂರು — ರಾಜ್ಯದಲ್ಲಿ ಹತ್ತು ದಿನಗಳಿಗೊಮ್ಮೆ ನಡೆಸಲಾಗುತ್ತಿರುವ ಮಿನಿ ಲಾಟರಿ ಯೋಜನೆಗೆ ದೊರೆತಿರುವ ಒಳ್ಳೆಯ ಸಾರ್ವಜನಿಕ ಪುರಸ್ಕಾರಕ್ಕೆ ಕಾರಣ, ವಾರ ವಾರ ಲಾಟರಿಗಳನ್ನು ನಡೆಸಲು ಲಾಟರಿ ಇಲಾಖೆ ನಿರ್ಧರಿಸಿರುವುದಾಗಿ ಪ್ರಕಟಿಸಲಾಗಿದೆ.

○

ತಿದ್ದುಪಡಿಗಳ ಗುರಿ

ನವ ದೆಹಲಿ — ರಾಜ್ಯಾಂಗಕ್ಕೆ ಯೋಜಿಸಿರುವ ತಿದ್ದುಪಡಿಗಳು ಜನತಾ ಅಭಿವೃದ್ಧಿ ಅವಶ್ಯಕತೆಗೆ ಗುರಿಯಾಗಿದೆ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ಸಭೆಯಲ್ಲಿ ತಿಳಿಸಿದರು.

ಸತ್ಯವಾದಿ ಅರವತ್ತನೇ ವರ್ಷಕ್ಕೆ

60 ನೇ ವರ್ಷಕ್ಕೆ ಪಾದಾರ್ಪಣ ಮಾಡಿರುವ ಮೈಸೂರಿನ "ಸತ್ಯವಾದಿ" ದಿನ ಪತ್ರಿಕೆ ಇನ್ನೂ ಚಿರಕಾಲ ಕನ್ನಡ ನಾಡಿಗೆ ಸೇವೆ ಸಲ್ಲಿಸಲಿ ಎಂದು ಹಾರೈಸುತ್ತೇವೆ.

ಸಂಪಾದಕ "ಎಚ್ಚರಿಕೆ" ದೈನಿಕ
ಶಿವಮೊಗ್ಗ

ಮೇಲ್ಕಂಡಂತೆ ತಮ್ಮ ಘನ "ಎಚ್ಚರಿಕೆ" ದೈನಿಕದಲ್ಲಿ "ಸತ್ಯವಾದಿ" ಗೆ ಶುಭಾಶಯ ಪ್ರಕಟಿಸಿ ಮಾಡಿರುವ ಬಗ್ಗೆ ಆ ಪತ್ರಿಕೆಯ ಸಂಪಾದಕರಿಗೆ ಕೃತಜ್ಞತಾ ಪೂರ್ವಕ ವಂದನೆಗಳು.

ಸಂಪಾದಕರು "ಸತ್ಯವಾದಿ"

ಬೆಂಗಳೂರು — ಹಾಸನ ಮತ್ತು ಮಂಗಳೂರು ರೈಲ್ವೆ ಪ್ರಾಜೆಕ್ಟಿಗೆ ಇಟ್ಟಿರುವ ರೂ. 4.5 ಕೋಟಿಯನ್ನು ಮತ್ತೆ ಯಾವುದಕ್ಕೂ ಬಳಸುವುದಿಲ್ಲವೆಂದು ರೈಲ್ವೆ ಮಂತ್ರಿಯವರು ತಿಳಿಸಿರುವುದಾಗಿ ಪಾರ್ಲಿಮೆಂಟು ಸದಸ್ಯ ಶ್ರೀ ಎನ್. ಶಿವಪ್ಪನವರು ತಿಳಿಸಿದರು

ಲಂಚ ಪಡೆಯುತ್ತಿದ್ದಾಗ ಸಿಕ್ಕಿಬಿದ್ದರು

ಬೆಂಗಳೂರು — ಬೆಳಗಾಂ ಜಿಲ್ಲೆಯ ಸೌಂದತ್ತಿಯ ಓರ್ವ ಗುಮಾಸ್ತನು 70 ರೂಪಾಯಿಗಳ ಲಂಚ ಕೇಳಿ ತೆಗೆದುಕೊಳ್ಳುತ್ತಿದ್ದಾಗ ಸಿಕ್ಕಿಬಿದ್ದನು ಅದೇ ರೀತಿ ರಾಯಚೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಓರ್ವ ನೌಕರನು ರೂ 100 ಲಂಚ ಕೇಳಿ ಅದರಲ್ಲಿ ಒಂದು ಭಾಗ ರೂ 45 ಪಡೆಯುತ್ತಿದ್ದಾಗ ಸಿಕ್ಕಿಬಿದ್ದನು.

★

ರೂ. 5 ಸಾವಿರ ಪಾರಿತೋಷಕ ನೀಡಿಕೆ

ಬೆಂಗಳೂರು — ಚಿನ್ನಗಿರಿ ಭಾಗದಲ್ಲಿ 2948 ಕೆ ಜಿ ಗಂಧದ ಮರ ಕಳ್ಳ ಸಾಗಾಣಿಕೆ ಪ್ರತಿಬಂಧಿಸಿದ ಸೇವೆಗಾಗಿ ಸರ್ಕಾರ ಶ್ರೀ ಮುನ್ನೋಜಿರಾವ್‌ರಿಗೆ 5 ಸಾವಿರ ರೂ. ಪಾರಿತೋಷಕ ಮಂಜೂರ್ಮಾಡಿದೆ.

★

ಮಲ್ಲಿಕಾರ್ಜುನಸ್ವಾಮಿಯವರ ನುಡಿ

ತುಮಕೂರು — ನಾಟಕೋತ್ಸವವು ಸರ್ವ ಜಿಲ್ಲ ಕೇಂದ್ರಗಳಲ್ಲಿಯೂ ನಡೆಸಲ್ಪಡಬೇಕೆಂದು ಈ ಸಂಬಂಧದ ಒಂದು ಸಮಾರಂಭದಲ್ಲಿ ಮಂತ್ರಿ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಯವರು ಹೇಳಿದರು.

★

ಎಣ್ಣೆ ವಶ ಮತ್ತು ಮೂವರ ಬಂಧನ

ಬೆಂಗಳೂರು — ಬಳ್ಳಾರಿಯ ಪೋಲೀಸರು ಕೂಡ್ಲಿಗಿಯಲ್ಲಿ ಒಂದು ಅಂಗಡಿಯಿಂದ 442 ಕೆ ಜಿ ಕಡಲೇಕಾಯಿ ಎಣ್ಣೆ ವಶಪಡಿಸಿಕೊಂಡು ಮೂವರನ್ನು ಬಂಧಿಸಿದರು

● ಹಿಮಾಲಯ ಪರ್ವತಗಳ ವಯಸ್ಸು 8 ಮಿಲಿಯ ವರ್ಷಗಳಿಂದ 38 ಮಿಲಿಯ ವರ್ಷಗಳ ವರೆಗೆ ಇರುವದೆಂದು ಪಂಜಾಬ್ ವಿಶ್ವವಿದ್ಯಾನಿಲಯದ ಇಬ್ಬರು ಪ್ರೊಫೆಸರರ ಅಭಿಪ್ರಾಯವಾಗಿದೆ

★

MYSORE RACES 1976

SATURDAY 4 th September
[The Police Cup]
(Carried over Jackpot)

SUNDAY 5 th September
(THE F. K. IRANI GOLD CUP and
The Karnataka Sub - Area Cup)

(2)

ಬಂಗ್ಲಾ ದೇಶಕ್ಕೆ ಸೇತುವೆಗಳ ದಾನ

ನವದೆಹಲಿ— ಭಾರತ ಸರಕಾರ ಬಂಗ್ಲಾ ದೇಶಕ್ಕೆ ಸ್ನೇಹ ಮತ್ತು ಸಹಕಾರ ಸಾಧ್ಯವನೆ ವ್ಯಕ್ತತೆಗಾಗಿ ರೂ. 63 ಲಕ್ಷದ 41 ಬೆಯಿಲಿ ಸೇತುವೆಗಳನ್ನು ಉದಾರ ದಾನ ಮಾಡಿದೆ.

●

ಹೂತಿಟ್ಟಿದ್ದ ವಿಗ್ರಹಗಳು

ಕುಂಭಕೋಣದ ಹತ್ತಿರ ಒಂದು ಶಿವದೇವಾಲಯದಲ್ಲಿ ಭೂಮಿಯೊಳಗಿನ ಕಲ್ಲಿನ ಪೆಟ್ಟಿಗೆಯ ನೆಲದ ಕೆಳಗೆ ಹೂತಿಟ್ಟಿದ್ದ ರೂ. 1 ಕೋಟಿ ಬೆಲೆ ಬಾಳುವ 16 ಸುಂದರ ವಿಗ್ರಹಗಳು ಪತ್ತೆಯಾಗಿವೆ.

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

Fair Price Shop in Actual Practice

Help The 'Gorakshana'

—Humanitarian Propoganda Monthly....

SHAKTI SUDHA

●

A Superb Tonic

ಪುಡ್‌ಲಾಂಡ್ 3976 ರಿಂದ

ಅವೋಘ ಆರಂಭ

ದಸ್ ನಂಬರಿ

ಹಿಂದಿ ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 3976 ರಿಂದ

ಸೆಕ್ರೆಟರಿ

ಎ. ನಾಗೇಶ್ವರರಾವ್ ವಾಣಿಶ್ರೀ ಅಭಿನಯ

ತೆಲುಗು ಪ್ರತಿ ದಿನ 3 ಪ್ರದರ್ಶನಗಳು

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು; ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

ಗೋರಕ್ಷಣೆ'ಕ್ಕೆ ನಿಮ್ಮ ಉದಾರ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram, Mysore 4